ಶ್ರೀ ಪಹದೇವ್ .—ಸ್ವಾಮಿ, ನಂಜನಗೂಡಿನಲ್ಲಿ ಚಿರತೆಗಳು ಊರಿನೊಳಗೆ ನುಗ್ಗಿ ದನಗಳನ್ನು ಕಡಿದು ಬಹಳ ತೊಂದರೆ ಕೊಡುತ್ತಿವೆ. ಅವುಗಳ ಮೇಲೆ ರೈತರು ಗುಂಡು ಹಾರಿಸಿದರೆ ಆ ರೈತರಮೇಲೆ ಕೇಸನ್ನು ಹಾಕುತ್ತಿದ್ದಾರೆ. ಇದರ ಬಗ್ಗೆ ಏನು ಹೇಳುತ್ತೀರಿ ?

ಅಧ್ಯಕ್ಷರು .— ಸ್ವಾಮಿ. ಇಲ್ಲಿ ಬಂದಿರುವ ವಿಚಾರ ನರಸಿಂಹರಾಜಪುರದಲ್ಲಿ ಆನೆಗಳ ಹಾವಳಿಗೆ ಸಂಬಂಧಪಟ್ಟದ್ದು, ಆದರೆ ನೀವು ಹೇಳುತ್ತಿರುವುದು ನಂಜನಗೂಡಿನಲ್ಲಿ ಚಿರತೆಗಳ ಹಾವಳಿಗೆ ಸಂಬಂಧ ಪಟ್ಟದ್ದು.

ಶ್ರೀ ಎ; ಲಕ್ಷ್ಮೀಸಾಗರ್ , . ಸ್ವಾಮಿ. ನಂಜನಗೂಡಿನಲ್ಲಿ ಚಿರತೆಗಳು ವ್ಯವಸಾಯದ ಫಸಲನ್ನು ಹಾಳುಮಾಡುತ್ತಿವೆ ಎಂಬುದು ಗಮನಾರ್ಹ ವಿಚಾರ

ಶ್ರೀ ಮಹದೇವ್.— ರೈತರ ದನಗಳನ್ನು ಚಿರತೆಗಳು ತೊಂದರೆಗೆ ಒಳಗು ಮಾಡುತ್ತಿರುವುದರಿಂದ ಹೇಳುತ್ತಿದ್ದೇನೆ. ಅವು ಫಸಲಿಗೆ ಬರುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು .— ಸ್ವಾಮಿ, ಹೊಸನಗರದಲ್ಲಿ ಆನೆಗಳ ಹಾವಳಿ ಇದೆ.....

ಶ್ರೀ ಜೀವಿಜಯ .— ಹೊಸನಗರದಲ್ಲಿ ಆನೆಗಳ ಹಾವಳಿ ಇದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆದರೂ ಕೂಡ ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಈ ರೀತಿ ಆನೆಗಳ ಹಾವಳಿ ಇದೆ ಅಲ್ಲೆಲ್ಲಾ ಹಾನಿಗೊಳಗಾದ ರೈತರಿಗೆ ಪರಿಹಾರಧನವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.

ಮಾಲೂರು ತಾಲೂಕಿನ ಕೈಗಾರಿಕಾ ಅಭಿವೃದ್ಧಿ

೨೩. ಶ್ರೀ. ಎ. ನಾಗರಾಜು (ಮಾಲೂರು) ಮಾನ್ಯ ಕೈಗಾರಿಕಾಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಾಲೂರು ತಾಲೂಕಿನಲ್ಲಿ ಕೈಗಾರಿಕೆ ಪ್ರದೇಶವನ್ನು ಅಭಿವೃದ್ಧಿಗೊಳಿಸುವ ಯಾವುದಾದರೂ ಯೋಜನೆ ಸರ್ಕಾರದ ಮುಂದೆ ಇದೆಯೆ?

ಆ) ಹಾಗಿದ್ದಲ್ಲಿ ಆ ಪ್ರದೇಶದ ಅಭಿವೃದ್ಧಿಗಾಗಿ ಸರಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್ ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

ಇದೆ,

ಕೈಗಾರಿಕಾ ಪ್ರದೇಶದ ನಿರ್ಮಾಣಕ್ಕಾಗಿ ಮಾಲೂರು ತಾಲ್ಲೂಕಿನ ಕಂರಂಡಹಳ್ಳಿಯಲ್ಲಿ ೭೫ ಎಕರೆ ೨೭ ಗುಂಟೆ ಪ್ರದೇಶವನ್ನು ಭೂಸ್ವಾಧೀನ ಪಡಿಸಿಕೊಳ್ಳುವ ಕ್ರಮ ಕೈಗೊಳ್ಳಲಾಗಿದೆ. ಈ ವಿಸ್ತೀರ್ಣದಲ್ಲಿ ಇದುವರೆವಿಗೂ ೫೩ ಎಕ್ರೆ ೧೮ ಗುಂಟೆಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಬೋರ್ಡ್ ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದೆ. ಉಳಿದ ೨೩ ಎಕರೆ ೯ ಗುಂಟೆ ಸರಕಾರಿ ಜಮೀನಿನ ವರ್ಗಾವಣೆ ಬಗ್ಗೆ ಕಂದಾಯ ಇಲಾಖೆಯೊಡನೆ ವ್ಯವಹಾರ ನಡೆಯುತ್ತಿದೆ. ಈ ಮಧ್ಯೆ ಕೈಗಾರಿಕೆ ಲೇಔಟ್‌ನ ನಿರ್ಮಾಣ ಕಾರ್ಯವನ್ನು ಬೋರ್ಡ್ ತೆಗೆದು ಕೊಂಡಿದೆ

* * * *

ಚ. ಪ್ರ. ೨೩

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಸರ್ಕಾರದ ಪರವಿಯಿಂದ ಉತ್ತರವೇ ಬಂದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ —ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ೧೯೭೮–೭೯ ರಿಂದ ೮೧–೮೨ ರವರೆಗೆ ಹೊಸಕೋಟೆ ತಾಲೂಕಿನಲ್ಲಿ ವಿತರಣೆ ಮಾಡಿದ ಸಿಮೆಂಟ್ ಎಷ್ಟು ? ಲೈಸೆನ್ಸ್ ಪಡೆದ ವ್ಯಕ್ತಿಗಳ ಹೆಸರುಗಳು ಇನ್ನೂ ಮುಂತಾದ ವಿವರಗಳನ್ನು ಬಹಳವಾಗಿ ಕೇಳಿದ್ದಾರೆ. ಅದಕ್ಕೆ ಸಂಪೂರ್ಣವಾದ ಮಾಹಿತಿಯನ್ನು ನಾನು ಮುಂದಿನವಾರ ಕೊಡುತ್ತೇನೆ. ಇದು ೫ ವರ್ಷಗಳ ಅವಧಿಗೆ ಸಂಬಂಧಿಸಿದ್ದರಿಂದ ಎಲ್ಲ ಮಾಹಿತಿಗಳನ್ನೂ ಸಂಗ್ರಹಿಸಿ ಮುಂದಿನವಾರ ಉತ್ತರವನ್ನೊದಗಿಸುತ್ತೇನೆ.

---

*ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಅಧ್ಯಕ್ಷರು—ಮಾನ್ಯ ಸದಸ್ಯರ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

ಸೇಡಂ ತಾಲೂಕಿನಲ್ಲಿರುವ ಶಾಹಾಬಾದ್ ಕಲ್ಲುಗಣಿಗಳ ಮೇಲಿನ ರಾಜಧನ

೩೦ ಶ್ರೀ ನಾಗಾರೆಡ್ಡಿ ಎಲ್. ಪಾಟೀಲ್ (ಸೇಡಂ) ಮಾನ್ಯ ಕೈಗಾರಿಕಾಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸೇಡಂತಾಲ್ಲೂಕಿನಲ್ಲಿರುವ ಶಹಬಾದ್ ಬಂಡೆಗಳ ಭೂಗಣಿಗಳ ಸಂಖ್ಯೆ ಎಷ್ಟು?

ಆ) ಮೇಲ್ಕಂಡ ಭೂಗಣಿಗಳಿಂದ ೧೯೭೦ ರಿಂದ ೧೯೮೨ ರ ವರೆಗೆ ಬಂದ ರಾಯಲ್ಟಿ ಹಣ ಎಷ್ಟು? ಹಾಗೂ ಕಂಟ್ರಾಕ್ಟರ್‌ಗಳ ಹೆಸರು ವಿಳಾಸಗಳೇನು ?

ಇ) ಮೇಲ್ಕಂಡ ರಾಯಲ್ಟಿ ಹಣದಿಂದ ಸೇಡಂ ತಾಲ್ಲೂಕಿನಲ್ಲಿಯ ಭೂಗಣಿಗಳ ಅಭಿವೃದ್ಧಿ ಬಗ್ಗೆ ಕೈಗೊಂಡ ಕ್ರಮಗಳೇನು? ಈ ಬಗ್ಗೆ ಮಾಡಿದ ವಿವರ ೧೯೭೦ ರಿಂದ ೧೯೮೨ ರವರೆಗೆ ವ್ಯಯಮಾಡಿದ ವಿವರಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

ಅ) ೧೦೯

ಆ) ಭೂಗಣಿಗುತ್ತಿಗೆಗಳಿಂದ ೧೯೭೦ ರಿಂದ ೧೯೮೧ ರವರೆಗೆ ವಸೂಲಾದ ರಾಯಲ್ಟಿ ಮೊತ್ತ ರೂ. ೧೩,೮೦,೨೪೭-೦೦. ಈ ಬಗ್ಗೆ ಸಂಬಂಧಪಟ್ಟ ೧೦೯ ಗುತ್ತಿಗೆದಾರರ ಹೆಸರು ವಿಳಾಸಗಳ ವಿವರ ಪತ್ರವನ್ನು ವಿವರಪಟ್ಟಿ 'ಅ' ದಲ್ಲಿ ಕೊಡಲಾಗಿದೆ. ೧೯೮೨ ನೇ ಸಾಲಿನ ಕಲ್ಲುಗಣಿಗಳ ಲೆಕ್ಕ ಪರಿಶೀಲನೆಯಲ್ಲಿದೆ.

ಸರಕಾರಕ್ಕೆ ಸಂದ ರಾಯಲ್ಟಿ ಹಣದಿಂದ ಕರ್ನಾಟಕ ಉಪಖನಿಜಗಳ ರಿಯಾಯಿತಿ ನಿಯಮಗಳು ೧೯೬೯ ರಲ್ಲಿ ಯಾವುದೇ ಅಭಿವೃದ್ಧಿ ಕ್ರಮಗಳನ್ನು ಕೈಗೊಳ್ಳಲು ಅವಕಾಶವಿರುವುದಿಲ್ಲವಾದ್ದರಿಂದ ಸೇಡಂ ತಾಲ್ಲೂಕಿನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿವರ ಪಟ್ಟಿ—ಅ

ಸೇಡಂ ತಾಲ್ಲೂಕಿನಲ್ಲಿರುವ ಗಣಿ ಗುತ್ತಿಗೆಗಳ ಕಂಟ್ರಾಕ್ಟರುಗಳ ಹೆಸರು ಮತ್ತು ವಿಳಾಸ.

ಸಂಖ್ಯೆ	ಹೆಸರು ಮತ್ತು ವಿಳಾಸ	ಗಣಿ ಗುತ್ತಿಗೆ ನಂಬರು
೧	೨	೩
೧	ಶ್ರೀ ಭೀಮಶೆಟ್ಟಿ ಬಿನ್ ಶರಣಪ್ಪ ಮಡಕಲ್, ಸೇಡಂ ತಾಲ್ಲೂಕು	೨೨೬೧
೨	ಖೇದಪ್ಪ ಬಿನ್ ಮಂಗಲಪ್ಪ, ಮಾಲನ್ ಅಡ್ಡಾ, ಸೇಡಂ ತಾಲ್ಲೂಕು	೨೨೬೨
೩	ಸರ್ವಶ್ರೀ ಕುರ್ಕುಂಟಿ ಅಂಡ್ ಸೇಡಂ ಸ್ಟೋರ್ಸ್ ಪೈ ವೈಸ್ ಲಿ. ಸೇಡಂ ತಾಲ್ಲೂಕು.	೨೨೯೦
೪	ಶ್ರೀ ಚಂದ್ರಪ್ಪ ಬಿನ್ ಪಂಚಪ್ಪ ಮಂಟಾಲಿ, ಕುರ್ಕುಂಟಿ, ಸೇಡಂ ತಾಲ್ಲೂಕು	೨೩೨೬
೫	ಸರ್ವಶ್ರೀ ಮಾದವರಾವ್, ವಿ. ಅಂಚಾಟ ಮತ್ತು ಮಕ್ಕಳು, ಸೇಡಂ-ಹಿರಿಹೆಚ್೨೨೨	೨೪೦೭
೬	ಶ್ರೀ ರಘುನಾಥ ಟೊಸನಿವಾಲ, ಶ್ರೀರಾಂ ಇಂಡಸ್ಟ್ರೀಸ್, ಸೇಡಂ	೨೪೬೪